ಸಂಪುಟ : 41 ಸಂಚಿಕೆ : 12 ಫೋನ್ : 0816-2278198 | 2257588 | ಫ್ಯಾಕ್ಸ್ : 2273793 07 ಫೆಬ್ರುವರಿ 2018 ಬುಧವಾರ POST REG NO . L-2/RNP- 364/TMR/2018-20 ಪುಟಗಳು :10 ಬೆಲೆ ₹ 2.50

ತುಮಕೂರು | Tumakuru

ತುಮಕೂರು | ಚಿತ್ರದುರ್ಗ | ದಾವಣಗೆರೆ | ಹಾವೇರಿ | ಬಳ್ಳಾರಿ ಜಿಲ್ಲೆಗಳ ಪ್ರಾದೇಶಿಕ ದಿನಪತ್ರಿಕೆ

# ಪ್ರಜಾ ಪ್ರಗತಿ

ಉಪ ಸಂಪಾದಕರು : ಟಿ.ಎನ್.ಮಧುಕರ್

ಸಂಪಾದಕರು : ಎಸ್. ನಾಗಣ್ಣ

E-mail : For News: prajapragathi1@gmail.com
Web : prajapragathi.com



ಪಾರ್ಟಿಯಲ್ಲಿ ನೃತ್ಯ ಮಾಡಲು ನಿರಾಕರಿಸಿದ ನಟಿ ಸುಂಬಲ್ ಖಾನ್ ಗುಂಡಿಟ್ಟು ಹತ್ಯೆ

ವಿವರ : ಪುಟ 8

ಉತ್ತರ ಪ್ರದೇಶದಲ್ಲಿ ಒಂದೇ ಸಿರಿಂಜ್ ಬಳಕೆಯಿಂದ 40 ಮಂದಿಗೆ ಹೆಚ್.ಐ.ವಿ.ಸೋಂಕು



ವಿವರ : ಪುಟ 10



ಮಹದಾಯಿ ವಿವಾದ ನ್ಯಾಯಾಧೀಕರಣ ವಿಚಾರಣೆ: ಫೆ.8ಕ್ಕೆ ಮುಂದೂಡಿಕೆ

ವಿವರ : ಪುಟ 8

ತ್ಯಾಜ್ಯ ನಿರ್ವಹಣೆಗೆ ಅಸಮರ್ಪಕ ಮಾಹಿತಿ: ಕೇಂದ್ರದ ವಿರುದ್ಧ ಸುಪ್ರೀಂ ಗರಂ

ವಿವರ : ಪುಟ 10



ಶ್ರೀ ಮಹಾಲಕ್ಷ್ಮಿ ಜ್ಯೂಯಲರ್ಸ್
ಉತ್ತಮ ಗುಣಮಟ್ಟ ಹಾಗೂ ಪರಿಶುದ್ಧವಾದ ಸೊಬಗು
SINCE 1991
ಶ್ರೀ ಮಹಾಲಕ್ಷ್ಮೀ ಆರ್ಕೇಡ್
ಎಸ್.ಎಸ್.ಪುರಂ ಮುಖ್ಯ ರಸ್ತೆ,
ತುಮಕೂರು- 0816-2276752

ವೆಂಕೋಬ್ ಕೋಳಿ ಧಾರಣೆ
ಫಾರಂ ಕೋಳಿ 1 ಕೆಜಿಗೆ ರೂ.64/-
ರಿಟೈಲ್ ಮಾರಾಟದ ದರ ಕೆ.ಜಿ.ಗೆ ರೂ. 85/-

| ವಿತ್‌ಸ್ಕಿನ್ | ವಿತೌಟ್ ಸ್ಕಿನ್ |
|---|---|
| ರೂ.123/- | ರೂ.140/- |

ಡಜನ್ ಮೊಟ್ಟೆಗೆ ರೂ.50/-

## ಚಿರತೆ, ವನ್ಯಜೀವಿ ನಿಯಂತ್ರಣಕ್ಕೆ ಯೋಜನೆ

### ವಿವಿಧ ಇಲಾಖೆ, ಸಂಸ್ಥೆಯ ಅಧಿಕಾರಿಗಳೊಂದಿಗೆ ಜಿಲ್ಲಾಧಿಕಾರಿಗಳ ಸಭೆ

ತುಮಕೂರು

ಚಿರತೆ ಸೇರಿದಂತೆ ವನ್ಯಜೀವಿಗಳು ತುಮಕೂರು ನಗರಕ್ಕೆ ಪ್ರವೇಶಿಸುವು ದನ್ನು ನಿಯಂತ್ರಿಸಲು ಅಲ್ಪಾವಧಿ ಮತ್ತು ದೀರ್ಘಾವಧಿ ಯೋಜನೆಗಳನ್ನು ರೂಪಿಸಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಕೆ.ಪಿ.ಮೋಹನ್‌ರಾಜ್ ಅವರು ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ

> ಕೋಳಿ ಮತ್ತಿತರ ಪ್ರಾಣಿಗಳ ಕಸದಿಂದ ಬೀದಿನಾಯಿಗಳ ಸಂಖ್ಯೆ ಹೆಚ್ಚಳವಾಗಿದೆ. ನಾಯಿ ಯನ್ನು ತಿನ್ನಲು ಚಿರತೆ ಆಗಮಿ ಸಿದೆ. ಬೀದಿನಾಯಿಗಳ ನಿಯಂತ್ರಣ ಹಾಗೂ ಪ್ರಾಣಿ ಕಸ ವನ್ನು ನಿರ್ವಹಣೆ ಮಾಡಲು ದೀರ್ಘಾವಧಿ ಕಾರ್ಯಕ್ರಮವನ್ನು ರೂಪಿಸ ಲಾಗುವುದು ಹಾಗೂ ದೇವರಾಯನದುರ್ಗ ಮೀಸಲು ಅರಣ್ಯ ಪ್ರದೇಶದಲ್ಲಿ ಜನರ ಸಂಚಾರ ಹಾಗೂ ಗಣಿಗಾರಿಕೆ ನಿಯಂತ್ರಣ, ಚೆಕ್‌ಪೋಸ್ಟ್ ತೆರೆಯುವುದು ಮತ್ತಿತರ ಅಂಶಗಳ ಬಗ್ಗೆ ದೀರ್ಘಾವಧಿ ಯೋಜನೆಯಲ್ಲಿ ಕ್ರಮ ಕೈಗೊಳ್ಳ ಲಾಗುವುದು.
>
> –ಕೆ.ಪಿ.ಮೋಹನ್‌ರಾಜ್ , ಡಿ.ಸಿ.



ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಇತ್ತೀಚೆಗೆ ತುಮಕೂರು ನಗರಕ್ಕೆ ಚಿರತೆ ಆಗಮಿಸಿ ಜನರಲ್ಲಿ ಆತಂಕ ಮೂಡಿಸಿತ್ತು. ಈ ರೀತಿ ವನ್ಯ ಜೀವಿಗಳು ನಗರ ಪ್ರದೇಶಕ್ಕೆ ಆಗಮಿಸುವುದನ್ನು ತಡೆಗಟ್ಟಲು ಕಾರ್ಯ ಯೋಜನೆ ರೂಪಿಸಲು ಜಿಲ್ಲಾ ಮಟ್ಟದ ಹಾಗೂ ತಾಲ್ಲೂಕು ಮಟ್ಟದ ಸಮಿತಿಗಳನ್ನು ರಚನೆ ಮಾಡಲಾಗುವುದು ಎಂದರು.

ಅಲ್ಪಾವಧಿ ಕ್ರಿಯಾ ಯೋಜನೆಯ ತುಮಕೂರು ನಗರದಲ್ಲಿ ಖಾಲಿ ಪ್ರದೇಶದಲ್ಲಿ ಬೆಳೆದಿರುವ ಹುಲ್ಲು ಮತ್ತು ಗಿಡಗಂಟೆಗಳನ್ನು ಟೂಡ ಮತ್ತು ಮಹಾನಗರ ಪಾಲಿಕೆಯ ವತಿಯಿಂದ ತೆರವುಗೊಳಿಸಲಾಗುವುದು. ವನ್ಯ ಜೀವಿಗಳನ್ನು ಸೆರೆ ಹಿಡಿಯಲು ಅರಣ್ಯ ಇಲಾಖೆ, ಅಗ್ನಿಶಾಮಕ ಹಾಗೂ ಪೊಲೀಸ್ ಸಿಬ್ಬಂದಿಗಳಿಗೆ ತರಬೇತಿ ನೀಡಲಾಗುವುದು ಎಂದು ಅವರು ತಿಳಿಸಿದರು.

ವನ್ಯ ಜೀವಿಗಳನ್ನು ಸೆರೆ ಹಿಡಿಯಲು ಅಗತ್ಯವಿರುವ ಜೀಪ್ ಸೇರಿದಂತೆ ಅತ್ಯಾಧುನಿಕ ಉಪಕರಣಗಳನ್ನು ಖರೀದಿಸಲು 35 ಲಕ್ಷ ರೂಗಳ ಅಗತ್ಯವಿದ್ದು ಸದರಿ ಉಪಕರಣಗಳನ್ನು ಸ್ಮಾರ್ಟ್‌ಸಿಟಿ ಯೋಜನೆಯಡಿ ಖರೀದಿಸಲಾಗುವುದು ಎಂದು ಅವರು ಹೇಳಿದರು.

ದೇವರಾಯನದುರ್ಗ ಸೇರಿದಂತೆ ಜಿಲ್ಲೆಯ ಮೀಸಲು ಅರಣ್ಯ ಪ್ರದೇಶದಲ್ಲಿ ಬೇಟೆ ಯಾಡುವುದನ್ನು ನಿಯಂತ್ರಿಸಲು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಲಾಗು ವುದು ಎಂದು ಅವರು ತಿಳಿಸಿದರು.

ಕೋಳಿ ಮತ್ತಿತರ ಪ್ರಾಣಿಗಳ ಕಸದಿಂದ ಬೀದಿನಾಯಿಗಳ ಸಂಖ್ಯೆ ಹೆಚ್ಚಳವಾಗಿದೆ. ನಾಯಿಯನ್ನು ತಿನ್ನಲು ಚಿರತೆ ಆಗಮಿಸಿದೆ. ಬೀದಿನಾಯಿಗಳ ನಿಯಂತ್ರಣ ಹಾಗೂ ಪ್ರಾಣಿ ಕಸವನ್ನು ನಿರ್ವಹಣೆ ಮಾಡಲು ದೀರ್ಘಾವಧಿ ಕಾರ್ಯಕ್ರಮವನ್ನು ರೂಪಿಸಲಾಗುವುದು ಎಂದ ಅವರು. ದೇವರಾಯನದುರ್ಗ ಮೀಸಲು ಅರಣ್ಯ ಪ್ರದೇಶದಲ್ಲಿ ಜನರ ಸಂಚಾರ ಹಾಗೂ ಗಣಿಗಾರಿಕೆ ನಿಯಂತ್ರಣ, ಚೆಕ್‌ಪೋಸ್ಟ್ ತೆರೆಯುವುದು ಮತ್ತಿತ್ತರ ಅಂಶಗಳ ಬಗ್ಗೆ ದೀರ್ಘಾವಧಿ ಯೋಜನೆಯಲ್ಲಿ ಕ್ರಮ

>>> 7ನೇ ಪುಟಕ್ಕೆ

## ನಕಲಿ ಬಂಗಾರದ ಅವಲಕ್ಕಿ ಚೈನು

ಮಿಡಿಗೇಶಿ

ಬ್ಯಾಂಕಿಗೆ ಒಡವೆ ಇಡುವ ವಿಷಯಕ್ಕೆ ಸಂಬಂಧಿಸಿದಂತೆ ಮತ್ತಷ್ಟು ಕುತೂಹಲಕಾರಿ ಸಂಗತಿಗಳು ಹೊರ ಬರುತ್ತಿದ್ದು, ಕಳೆದ ಮೂರು ವರ್ಷಗಳಿಂದ ಒಡವೆ ಪರೀಕ್ಷಕನು(ಅಪ್ರೈಸರ್) ಹಿಂದಿನ ಬ್ಯಾಂಕ್ ಅಧಿಕಾರಿಯೊಂದಿಗೆ ಸೇರಿಕೊಂಡು ಸಾಕಷ್ಟು ಬಂಗಾರ ಹಾಗೂ ಬೆಳ್ಳಿಯ ನಕಲಿ ಒಡವೆಗಳನ್ನು ಗ್ರಾಹಕರೊಂದಿಗೆ ಇಟ್ಟಿರುವ ಸಂಗತಿಗಳು ತಿಳಿದು ಬರುತ್ತಿವೆ. ಇತ್ತೀಚೆಗೆ ನೂತನವಾಗಿ ಬಂದ ಮ್ಯಾನೇಜರ್ ಒಡವೆಗಳ ಬಗ್ಗೆ ಅನುಮಾನಗೊಂಡು ಪರಿಶೀಲಿಸಲು ಮುಂದಾದಾಗ ಲಕ್ಷಾಂತರ ರೂ.ಗಳ ಆಭರಣಗಳು ನಕಲಿಯಾಗಿರುವುದು ತಿಳಿದು ಬಂದಿದೆ.



ಒಂದೇ ತರಹದ 40 ಅವಲಕ್ಕಿ ಚೈನು

ಮಧುಗಿರಿ ತಾಲ್ಲೂಕಿನ ಮಿಡಿಗೇಶಿ ಹೋಬಳಿಗೆ ಸೇರಿದ ಹೊಸಕೆರೆ ಗ್ರಾಮದಲ್ಲಿನ ಎಸ್‌ಬಿಐ ಬ್ಯಾಂಕಿಗೆ ಬರುವ ಗ್ರಾಹಕರು ತಮ್ಮ ಆಭರಣಗಳನ್ನು ಬ್ಯಾಂಕಿನಲ್ಲಿ ಒತ್ತೆ ಇಟ್ಟು ಹಣ ಪಡೆದುಕೊಳ್ಳುತ್ತಿರುವುದು ಸರ್ವೆ ಸಾಮಾನ್ಯ ಸಂಗತಿಯಾಗಿದೆ. ಆಭರಣಗಳ ಪರೀಕ್ಷೆ ಹಾಗೂ ದೃಢೀಕರಣ ಪಡಿಸಿಕೊಳ್ಳುವುದಕ್ಕೆಂದು ಆಭರಣ ಪರಿವೀಕ್ಷಕನಾದ ಗಂಗಾಧರ ಎನ್ನುವ ವ್ಯಕ್ತಿಯನ್ನು ಬ್ಯಾಂಕಿನವರು ನೇಮಿಸಿಕೊಂಡಿದ್ದರು.

ಈ ಅಕ್ಕಸಾಲಿಗನೇ ಬ್ಯಾಂಕಿಗೆ ಬಂದಂತಹ ಕೆಲವು ಗ್ರಾಹಕರ ಒಡವೆಗಳ ಜೊತೆಯಲ್ಲಿ ಈತನ ನಕಲಿ ಆಭರಣಗಳನ್ನು ಸೇರಿಸಿ ಗ್ರಾಹಕನಿಗೆ ಬೇಕಾಗಿರುವ ಹಣಕ್ಕಿಂತ ಹೆಚ್ಚಿಗೆ ಹಣವನ್ನು ಬ್ಯಾಂಕಿನಿಂದ ಪಡೆದುಕೊಳ್ಳುವಂತೆ ಪ್ರೇರೇಪಿಸುತ್ತಾನೆ. ಜನರಿಗೆ ಹಣ ನೀಡುವ ಆಸೆ ತೋರಿಸಿ ಅವರ ಒಡವೆಗಳನ್ನು ಬ್ಯಾಂಕಿನಲ್ಲಿ ಒತ್ತೆಯಿಡುವಂತೆ ಮಾಡಿರುವ ಆರೋಪವಿದೆ.

ಸುಮಾರು ಒಂದೇ ತರಹದ 40 ನಕಲಿ ಅವಲಕ್ಕಿ ಸರಗಳನ್ನು ಹಾಗೂ 10 ಕೆಜಿ ನಕಲಿ ಬೆಳ್ಳಿ ಆಭರಣಗ ಳನ್ನು ಬೇರೆಯವರ ಹೆಸರಿನಲ್ಲಿ ಅಡ ಇಟ್ಟಿರುತ್ತಾರೆಂದು ಆರೋಪ ಮಾಡಿರುತ್ತಾರೆ.

ಸದರಿ ಒಡವೆಗಳಲ್ಲಿ ಕೆಲವು ನಕಲಿ ಎಂಬುದು ಗೊತ್ತಾಗುತ್ತಿದ್ದಂತೆಯೇ ಆರೋಪಿತ ಸ್ಥಾನದಲ್ಲಿರುವವರು ರಾಜಿ ಸಂಧಾನ ಪ್ರಕ್ರಿಯೆಗಳಿಗೆ ಮುಂದಾಗಿದ್ದಾರೆಂದು ತಿಳಿದುಬಂದಿದೆ.

### ಪ್ರಧಾನಿ ಮೋದಿಗೆ ಸಿ.ಎಂ.ಸವಾಲು

ಬೆಂಗಳೂರು

ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ತಮ್ಮ ಪಕ್ಷದ ವತಿಯಿಂದ ಕಳಂಕ ರಹಿತ ಅಭ್ಯರ್ಥಿಗಳಿದ್ದರೆ ಸಿ.ಎಂ. ಅಭ್ಯರ್ಥಿಯಾಗಿ ಘೋಷಣೆ ಮಾಡಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸವಾಲು ಎಸೆದಿದ್ದಾರೆ. ನರೇಂದ್ರ ಮೋದಿ ಅವರು ಬೆಂಗಳೂರಿಗೆ ಬಂದು ಹೋದ ಬಳಿಕ ಬಿಜೆಪಿ ಮತ್ತು ಕಾಂಗ್ರೆಸ್ ವಲಯದಲ್ಲಿ ಟ್ವಿಟರ್ ಮೂದಲಿಕೆ ಮುಂದುವರಿದಿದೆ.

### ಆಸ್ಪತ್ರೆ ಮೇಲೆ ದಾಳಿ: ಉಗ್ರ ಪರಾರಿ

ಶ್ರೀನಗರ

ಬಂಧಿತ ಉಗ್ರನನ್ನು ತಪಾಸಣೆಗೆ ಆಸ್ಪತ್ರೆಗೆ ಕರೆತಂದಿದ್ದ ವೇಳೆ ಉಗ್ರರು ಆಸ್ಪತ್ರೆ ಮೇಲೆ ಗುಂಡಿನ ದಾಳಿ ನಡೆಸಿದ ಸಂದರ್ಭದಲ್ಲಿ ಬಂಧಿತ ಉಗ್ರಗಾಮಿಯೊಬ್ಬ ಪರಾರಿಯಾಗಿದ್ದಾನೆ. ಜಮ್ಮು ಕಾಶ್ಮೀರ ರಾಜಧಾನಿ ಶ್ರೀನಗರದ ಮಹಾರಾಜ್ ಅರಿಸಿಂಗ್ ಸರ್ಕಾರಿ ಆಸ್ಪತ್ರೆಯಲ್ಲಿ ಈ ಘಟನೆ ನಡೆದಿದೆ.

### ಆರ್.ಎಸ್.ಎಸ್. ಸೇರದಿದ್ದರೆ ಹಿಂದೂಗಳೇ ಅಲ್ಲ

ನವದೆಹಲಿ

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ದೈನಂದಿನ ಸಭೆಯಲ್ಲಿ ಭಾಗವಹಿಸದವರು ಹಿಂದೂಗಳೇ ಅಲ್ಲ ಎಂದು ಹೈದರಾಬಾದ್ ಬಿಜೆಪಿ ಶಾಸಕ ಟಿ.ರಾಜಾಸಿಂಗ್ ಹೇಳಿದ್ದಾರೆ. ಮಧ್ಯಪ್ರದೇಶದ ಸಭೆಯೊಂದರಲ್ಲಿ ಮಾತನಾಡಿರುವ ಅವರು, ಆರ್.ಎಸ್.ಎಸ್. ಒಂದು ಕಾರ್ಖಾನೆ ಇದ್ದಂತೆ. ಈ ಕಾರ್ಖಾನೆಯಲ್ಲಿ ನರೇಂದ್ರ ಮೋದಿ, ಯೋಗಿ ಆದಿತ್ಯನಾಥ್ ಮುಂತಾದವರು ಸೃಷ್ಟಿಯಾಗಿದ್ದಾರೆ ಎಂದಿದ್ದಾರೆ.

### ವಿವಾದದ ಸುಳಿಯಲ್ಲಿ ಮಣಿಕರ್ಣಿಕಾ

ನವದೆಹಲಿ

ಪದ್ಮಾವತ್‌ಗೆ ತೆರೆ ಬಿದ್ದ ನಂತರ ಇದೀಗ ಇನ್ನೊಂದು ಚಿತ್ರ ಮಣಿಕರ್ಣಿಕಾಗೆ ಕಂಟಕ ಎದುರಾಗಿದೆ. ಕಂಗನಾ ರಣಾವುತ್ ಅಭಿನಯದ ಐತಿಹಾಸಿಕ ಚಿತ್ರ ಮಣಿಕರ್ಣಿಕಾ ದ ಕ್ವೀನ್ ಆಫ್ ಜಾನ್ಸಿಗೆ ವಿರೋಧ ವ್ಯಕ್ತವಾಗಿದೆ. ಇತಿಹಾಸವನ್ನು ತಪ್ಪಾಗಿ ತೋರಿಸಲಾಗುತ್ತಿದೆ ಎಂದು ರಾಜಸ್ತಾನ ಬ್ರಾಹ್ಮಣ ಮಹಾಸಭಾ ಆರೋಪಿಸಿದೆ.

## ಪ್ರತಿಧ್ವನಿಸಿದ ರೌಡಿಶೀಟರ್ ಪಟ್ಟಿ

ಬೆಂಗಳೂರು

ರಾಜ್ಯದ ರೌಡಿ ಶೀಟರ್‌ಗಳ ಪಟ್ಟಿಯಲ್ಲಿರುವವರು ಬಿಜೆಪಿ ಪಕ್ಷಕ್ಕೆ ಸೇರಿದವರಿರಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನಸಭೆಯಲ್ಲಿ ವ್ಯಂಗ್ಯವಾಗಿ ವಾಗ್ದಾಳಿ ನಡೆಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಸದಸ್ಯರು ರೌಡಿ ಶೀಟರ್‌ಗಳ ಪರ ವಕಾಲತ್ತು ವಹಿಸಿ ಮಾತನಾಡುತ್ತಿದ್ದ ಸಂದರ್ಭದಲ್ಲಿ ಮಧ್ಯ ಪ್ರವೇಶಿಸಿದ ಮುಖ್ಯಮಂತ್ರಿ ಅವರು, ರೌಡಿ ಪಟ್ಟಿಯಲ್ಲಿರುವವರೆಲ್ಲರೂ ನಿಮ್ಮ ಪಕ್ಷಕ್ಕೆ ಸೇರಿದವರಾಗಿರಬೇಕು. ಇಲ್ಲವಾದಲ್ಲಿ ನೀವು ಅವರ ಪರವಾಗಿ ಇಷ್ಟು ಗಟ್ಟಿ ಧ್ವನಿಯಲ್ಲಿ ಮಾತನಾಡಲು ಸಾಧ್ಯವಿಲ್ಲ ಎಂದು ಕಿಚಾಯಿಸಿದರು.

ರೌಡಿ ಪಟ್ಟಿಯಲ್ಲಿ ಯಾರ್ಯಾರಿದ್ದಾರೆ ಎನ್ನುವ ಎಲ್ಲಾ ಮಾಹಿತಿಯನ್ನು ಬಹಿರಂಗಪಡಿಸಲು ಸಾಧ್ಯವಿಲ್ಲ, ಕಾನೂನು ಸುವ್ಯವಸ್ಥೆಯ ಹಿತ ದೃಷ್ಟಿಯಿಂದ ಕೆಲವು ಹೆಸರುಗಳನ್ನು ಮಾತ್ರ ಪ್ರಕಟಿಸಬೇಕು. ಸಮಾಜದ ಹಿತವನ್ನು ಗಮನದಲ್ಲಿಟ್ಟುಕೊಂಡು ರೌಡಿ ಪಟ್ಟಿಯ ಹೆಸರು ಬಹಿರಂಗ ಮಾಡಲಾಗುವುದು ಎಂದರು.

ರೌಡಿ ಪಟ್ಟಿಯಲ್ಲಿ ಅನಗತ್ಯವಾಗಿ ಯಾರ ಹೆಸರನ್ನೂ ಸೇರಿಸಲು ಸಾಧ್ಯವಿಲ್ಲ, ಇದಕ್ಕೆ ಸೂಕ್ತ ಕ್ರಮಗಳು ಇರುತ್ತವೆ. ಹಾಗೊಂದು ವೇಳೆ ಅಮಾಯಕರ ಹೆಸರು ಸೇರ್ಪಡೆಯಾಗಿರುವ ನಿರ್ದಿಷ್ಟ ಪ್ರಕರಣಗಳಿದ್ದರೆ ಅಂತಹವರ ಹೆಸರುಗಳನ್ನು ತೆಗೆದು ಹಾಕುವುದಾಗಿ ಭರವಸೆ ನೀಡಿದರು.

ಇದಕ್ಕೂ ಮುನ್ನ ಪ್ರತಿಪಕ್ಷ ನಾಯಕ ಜಗದೀಶ್ ಶೆಟ್ಟರ್, ಬಿಜೆಪಿಯ ಸಿ.ಟಿ. ರವಿ, ಆರ್. ಅಶೋಕ್, ಸುನಿಲ್



ಕುಮಾರ್, ವಿಶ್ವೇಶ್ವರ ಹೆಗಡೆ ಕಾಗೇರಿ, ಕೆ.ಜಿ. ಬೋಪಯ್ಯ ಮತ್ತಿತರರು ಮಾತನಾಡಿ, ಜನಪರ, ಹಿಂದೂಪರ ಹೋರಾಟಗಳಲ್ಲಿ ಭಾಗಿಯಾಗಿದ್ದವರ ಹೆಸರುಗಳನ್ನು ಸಹ ರೌಡಿ ಪಟ್ಟಿಯಲ್ಲಿ ಸೇರಿಸಲಾಗಿದೆ. ಇದರಲ್ಲಿ ರಾಜಕೀಯ ಉದ್ದೇಶ ಅಡಗಿದೆ ಎಂದು ಆಪಾದಿಸಿದರು.

ಗೃಹ ಸಚಿವ ರಾಮಲಿಂಗಾ ರೆಡ್ಡಿ, ತಾವು ಗೃಹ ಸಚಿವರಾಗಿ ಪದಗ್ರಹಣ ಮಾಡಿದ ನಂತರ ನಡೆದ ಮೊದಲ ಸಭೆಯಲ್ಲಿ ಬಹು ದೀರ್ಘ ಕಾಲದಿಂದ ಅಪರಾಧ ಚಟುವಟಿಕೆಯಿಂದ ದೂರ ಇರುವವರನ್ನು ರೌಡಿ ಪಟ್ಟಿಯಿಂದ ಕೈ ಬಿಡುವಂತೆ ನಿರ್ದೇಶನ ನೀಡಿದ್ದೆ. ಕೆಲವರಿಗೆ 60, 70 ವರ್ಷ ವಯಸ್ಸಾಗಿರುತ್ತದೆ. ಯಾವುದೋ ಕಾಲದಲ್ಲಿ ಯಾವುದೋ ಒಂದು ಅಪರಾಧ ಚಟುವಟಿಕೆಯಲ್ಲಿ ಭಾಗಿಯಾಗಿದ್ದ ಮಾತ್ರಕ್ಕೆ ಅವರು ಜೀವನ ಪರ್ಯಂತ ರೌಡಿ ಪಟ್ಟ ಕಟ್ಟಿಕೊಂಡು ಬದುಕುವಂತಾಗಬಾರದು ಎಂದು ಹೇಳಿದ್ದೆ. ಇದಕ್ಕಾಗಿ ಸೂಕ್ತ ಮಾರ್ಗ ಸೂಚಿ ಸಿದ್ದಪಡಿಸಿ ನಿರ್ದೇಶನ ನೀಡಲಾಗಿತ್ತು ಎಂದು ಹೇಳಿದರು. ಅಮಾಯಕರು

>>> 7ನೇ ಪುಟಕ್ಕೆ

## 11ಮಂದಿ ಅಂತರ್ ಜಿಲ್ಲಾ ಕಳ್ಳರ ಬಂಧನ

### ಮಕ್ಕಳನ್ನು ಬಳಸಿ ಕಳ್ಳತನ:5 ಲಕ್ಷ ಮೌಲ್ಯದ ಚಿನ್ನಾಭರಣ ವಶ

ಕೊರಟಗೆರೆ

ತಾಲ್ಲೂಕು ಸೇರಿದಂತೆ ಜಿಲ್ಲಾದ್ಯಂತ ಕೈಚಳಕ ತೋರಿಸಿದ 11 ಜನ ಅಂತರ್‌ಜಿಲ್ಲಾ ಕಳ್ಳರನ್ನು ಕೊರಟಗೆರೆ ಪೊಲೀಸರ ತಂಡ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಕಳೆದ 2ತಿಂಗಳ ಹಿಂದಷ್ಟೇ ಸೋಂಪುರದ ಪುಟ್ಟೇಶ್ವರ ಮಠದ ಸ್ವಾಮಿಗಳ ಮನೆಯಲ್ಲಿದ್ದ ವೃದ್ಧೆಯ ಕಣ್ಣಿಗೆ ಮಂಪರು ಬರುವ ದ್ರವ್ಯವನ್ನು ಸಿಂಪಡಿಸಿ 90 ಗ್ರಾಂ ಬಂಗಾರ ಹಾಗೂ 50 ಸಾವಿರ ನಗದನ್ನು ದೋಚಿ ಪಾರಾರಿಯಾಗಿದ್ದ ಕಳ್ಳರಿಗೆ ಬಲೆ ಬೀಸಿದ ಪೊಲೀಸರು ಪ್ರಕರಣದ ಆರೋಪಿಗಳನ್ನು ಬಂಧಿಸಿ ವಿಚಾರಣೆ ನಡೆಸಿದಾಗ ತಾಲ್ಲೂಕು, ಜಿಲ್ಲೆ

> ಮಾದಕ ದುಶ್ಚಟಗಳಿಗೆ ಬಲಿಯಾಗು ತ್ತಿರುವ ಮಕ್ಕಳು ಇಂತಹ ಕಳ್ಳತನಗಳಂತ ಕೃತ್ಯಗಳಿಗೆ ಭಾಗಿಯಾಗಿತ್ತಿರುವುದು ಶೋಚನೀಯ. ಪೋಷಕರು ಸಹ ತಮ್ಮ ಮಕ್ಕಳ ಬದಲಾವಣೆಗಳ ಬಗ್ಗೆ ಗಮನಹರಿಸುವ ಮೂಲಕ ಜಾಗೃತಿ ವಹಿಸಬೇಕು. ಶಿಕ್ಷಕರು ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಚಟುವಟಿಕೆಗಳನ್ನು ಪೋಷಕರಿಗೆ ತಿಳಿಸಬೇಕು.
>
> -ಕಲ್ಲೇಶಪ್ಪ, ಡಿವೈಎಸ್‌ಪಿ. ಮಧುಗಿರಿ.



ಸೇರಿದಂತೆ ಅಂತರ್‌ಜಿಲ್ಲೆಯಲ್ಲಿಯೂ ಕಳ್ಳತನ ಮಾಡಿರುವುದನ್ನು ಒಪ್ಪಿಕೊಂಡಿದ್ದಾರೆ.

ತುಮಕೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದಿವ್ಯ ವಿ.ಗೋಪಿನಾಥ್ ಹಾಗೂ ಡಿವೈಎಸ್‌ಪಿ ಕಲ್ಲೇಶಪ್ಪನವರ ಮಾರ್ಗದರ್ಶನದಂತೆ ಕೊರಟಗೆರೆ ಸಿಪಿಐ ಮುನಿರಾಜು ಹಾಗೂ ಪಿಎಸ್‌ಐ ಮಂಜುನಾಥ್ ತಂಡ ದೊಡ್ಡ ಮಠದ ಪ್ರಕರಣವನ್ನು ಭೇದಿಸಲು ಬೆಂಗಳೂರು, ಕೊಡಗು, ಚಿಕ್ಕಮಗಳೂರು, ತುಮಕೂರು ಜಿಲ್ಲೆಗಳಲ್ಲಿ ಕಾರ್ಯಾಚರಣೆ ನಡೆಸಿ ಕಳ್ಳರನ್ನು ಬಂಧಿಸಿ, ಕಳ್ಳರಿಂದ 5ಲಕ್ಷ ರೂ. ಮೌಲ್ಯದ 143 ಗ್ರಾಂ ಚಿನ್ನಾಭರಣ ಮತ್ತು 2 ಕಾರುಗಳನ್ನು ವಶಪಡಿಸಿಕೊಂಡಿದ್ದಾರೆ.

ತುಮಕೂರಿನ ಹೆಗ್ಗೆರೆಯ ಕಿರಣ್, ಬೆಂಗಳೂರಿನ ನಾಗರಬಾವಿಯ ಯಶ್ವಂತ್, ಮನೋಜ್, ಕೊಡಗು ಮೂಲದ ನಿಶಾನ್‌ನನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಚಿಕ್ಕತೊಟ್ಲುಕೆರೆ, ತಮಿಳುನಾಡು ಮೂಲದ

>>> 7ನೇ ಪುಟಕ್ಕೆ

## ಒಳಚರಂಡಿ ತ್ಯಾಜ್ಯದ ದುರ್ನಾತಕ್ಕೆ ಜನತೆ ತತ್ತರ

ತುಮಕೂರು

''ತುಮಕೂರು ನಗರದ ಬಿ.ಎಚ್.ರಸ್ತೆಯ ಶ್ರೀ ಸೋಮೇಶ್ವರ ದೇವಾಲಯದ ಬಳಿ (ಭದ್ರಮ್ಮ ಛತ್ರದ ಪಕ್ಕ) ಒಳಚರಂಡಿ ಪೈಪ್ ಅನ್ನು ಒಡೆದು ತೆರೆದ ದೊಡ್ಡ ಚರಂಡಿಗೆ ಹರಿಯ ಬಿಟ್ಟಿರುವ ಪರಿಣಾಮ, ಆ ಸ್ಥಳದಲ್ಲಷ್ಟೇ ಅಲ್ಲದೆ ಪಕ್ಕದ ಬಿದಿರುಮೆಳೆ ತೋಟ, ಶಂಕರಪುರಂ ಮತ್ತು ರವೀಂದ್ರನಾಥ ಟಾಗೂರ್ ನಗರದಲ್ಲಿ ಒಳಚರಂಡಿ ತ್ಯಾಜ್ಯದ ದುರ್ನಾತ ಉಂಟಾಗಿದ್ದು, ಜನತೆ ತತ್ತರಗೊಂಡಿದ್ದಾರೆ. ಈ ಬಗ್ಗೆ ಮಹಾನಗರ ಪಾಲಿಕೆಯ ಗಮನ ಸೆಳೆಯುತ್ತಿದ್ದರೂ, ಕಳೆದ ನಾಲ್ಕು ತಿಂಗಳುಗಳಿಂದ ಮಹಾನಗರ ಪಾಲಿಕೆ ಯಾವುದೇ ಕ್ರಮ ಜರುಗಿಸದೆ ನಿಷ್ಕ್ರಿಯವಾಗಿದೆ'' ಎಂದು ಪಾಲಿಕೆಯ ಆಡಳಿತಾರೂಢ ಜೆ.ಡಿ.ಎಸ್.ನ ಕಾರ್ಪೊರೇಟರ್ ರಾಮಕೃಷ್ಣ -16ನೇ ವಾರ್ಡ್ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

''ನಗರದ ಕೃಷ್ಣರಾಜೇಂದ್ರ ಬಡಾವಣೆಯ ಚಾಮುಂಡೇಶ್ವರಿ ದೇವಾಲಯದ ಬಳಿ ಒಳಚರಂಡಿ ಪೈಪ್‌ಲೈನ್‌ನಲ್ಲಿ ಬ್ಲಾಕ್ ಆಗಿದೆ. ಕಳೆದ ನಾಲ್ಕು ತಿಂಗಳುಗಳಿಂದ ಈ ಸಮಸ್ಯೆ ಕಾಡುತ್ತಿದೆ. ಒಳಚರಂಡಿ ತ್ಯಾಜ್ಯವು ರಸ್ತೆಗೆ ಉಕ್ಕಿ ಹರಿಯುವುದನ್ನು ತಡೆಗಟ್ಟಲೆಂದು ಸೋಮೇಶ್ವರ ದೇವಾಲಯದ ಬಳಿ ಪೈಪ್ ಅನ್ನು ಒಡೆದು, ತ್ಯಾಜ್ಯವನ್ನು ದೊಡ್ಡ ಚರಂಡಿಗೆ ಹರಿಯಬಿಡಲಾಗಿದೆ. ದೊಡ್ಡ ಚರಂಡಿಯು ತೆರೆದ ಚರಂಡಿ ಆಗಿರುವುದರಿಂದ ಈ ತ್ಯಾಜ್ಯವು ಬಿದಿರುಮೆಳೆ ತೋಟ, ಶಂಕರಪುರಂ, ರವೀಂದ್ರನಾಥ ಟಾಗೂರ್ ನಗರವನ್ನು ಹಾದು ಅಮಾನಿಕೆರೆಯತ್ತ ಸಾಗುತ್ತದೆ. ಈ ಭಾಗದ ಉದ್ದಕ್ಕೂ ಈ ತ್ಯಾಜ್ಯದ ದುರ್ನಾತ ಉಂಟಾಗಿದ್ದು,

> ''ಈ ಸಮಸ್ಯೆ ಬಗ್ಗೆ ನಾನು ಮಹಾ ನಗರ ಪಾಲಿಕೆಯ ಸಭೆಯಲ್ಲಿ ಪ್ರಸ್ತಾಪಿಸಿದ್ದೇನೆ. ಪಾಲಿಕೆಯ ಆಯುಕ್ತರ ಗಮನ ಸೆಳೆದಿದ್ದೇನೆ. ಆದರೂ ಈವರೆಗೆ ಯಾವುದೇ ಕ್ರಮವನ್ನು ಜರುಗಿಸಿಲ್ಲ''
>
> –ರಾಮಕೃಷ್ಣ



ಸ್ಥಳೀಯ ನಿವಾಸಿಗರು ಸಂಕಷ್ಟಕ್ಕೊಳಗಾಗಿದ್ದಾರೆ. ಅನಾರೋಗ್ಯಕ್ಕೂ ತುತ್ತಾಗುತ್ತಿದ್ದಾರೆ'' ಎಂದು ಅವರು 'ಪ್ರಜಾಪ್ರಗತಿ'ಯೊಡನೆ ಮಾತನಾಡುತ್ತ ಆತಂಕದಿಂದ ತಿಳಿಸಿದರು.

''ನಗರದ ಎಸ್.ಐ.ಟಿ. ಬಡಾವಣೆ, ಸೋಮೇಶ್ವರ ಬಡಾವಣೆ, ಸಿದ್ಧಗಂಗಾ ಬಡಾವಣೆಗಳ ಒಳಚರಂಡಿ ತ್ಯಾಜ್ಯವು ಸೋಮೇಶ್ವರ ದೇವಾಲಯದ ಬಳಿ ಇರುವ ಪೈಪ್‌ಲೈನ್ ಮೂಲಕವೇ ಮುಂದಕ್ಕೆ ಸಾಗುತ್ತದೆ. ಆದರೆ ಇಲ್ಲಿನ ಪೈಪ್ ಲೈನ್‌ನ್ನು ಒಡೆದು ಹೊರಕ್ಕೆ ಹರಿಯುವಂತೆ ಮಾಡಲಾಗಿದೆ. ಇಷ್ಟೊಂದು ದೊಡ್ಡ ಬಡಾವಣೆಗಳ ತ್ಯಾಜ್ಯವು ದೊಡ್ಡ ಚರಂಡಿಯಲ್ಲಿ ಹರಿದು ಬರುವುದೆಂದರೆ ಅದರ ಪ್ರಮಾಣವನ್ನು ಯಾರಾದರೂ ಊಹಿಸಿಕೊಳ್ಳಬಹುದು'' ಎಂದು ಅವರು ತಿಳಿಸಿದ್ದಾರೆ.

''ಈ ಸಮಸ್ಯೆ ಬಗ್ಗೆ ನಾನು ಮಹಾನಗರ ಪಾಲಿಕೆಯ ಸಭೆಯಲ್ಲಿ ಪ್ರಸ್ತಾಪಿಸಿದ್ದೇನೆ. ಪಾಲಿಕೆಯ ಆಯುಕ್ತರ ಗಮನ ಸೆಳೆದಿದ್ದೇನೆ. ಆದರೂ ಈವರೆಗೆ ಯಾವುದೇ ಕ್ರಮವನ್ನು ಜರುಗಿಸಿಲ್ಲ'' ಎಂದು ರಾಮಕೃಷ್ಣ ಆಕ್ರೋಶದಿಂದ ನುಡಿದರು.

#### 'ರೆಡಿ ಫಂಡ್' ಇರಬೇಕು

''ಪಾಲಿಕೆಯಲ್ಲಿ ಇಂತಹ ತುರ್ತು ಕೆಲಸಗಳನ್ನು ಕೈಗೊಳ್ಳಲೆಂದೇ 'ರೆಡಿ ಫಂಡ್' ಇರಬೇಕು. 'ಜನರಲ್ ಫಂಡ್' ಇದೆಯಾದರೂ, ಈ 'ಜನರಲ್ ಫಂಡ್'ನಿಂದ ಸಕಾಲಕ್ಕೆ ಬಿಲ್ ಮೊತ್ತ ಪಾವತಿ ಆಗುವುದಿಲ್ಲವೆಂಬ ಕಾರಣಕ್ಕಾಗಿ ಯಾವ ಗುತ್ತಿಗೆದಾರರೂ ಕೆಲಸ ಮಾಡಲು ಮುಂದೆ ಬರುವುದಿಲ್ಲ. ಆದ್ದರಿಂದ ಪ್ರತ್ಯೇಕವಾಗಿ 'ರೆಡಿ ಫಂಡ್' ಇರಬೇಕಾಗುತ್ತದೆ. ಈ ಬಗ್ಗೆ ಸಹ ಪಾಲಿಕೆಯ ಸಭೆಯಲ್ಲಿ ಒತ್ತಾಯಿಸಿದ್ದರೂ, ಆಯುಕ್ತರ ಗಮನಸೆಳೆದಿದ್ದರೂ ಪ್ರಯೋಜನವಾಗಿಲ್ಲ'' ಎಂದು ವಿಷಾದದಿಂದ ಹೇಳಿದರು.

#### ರಸ್ತೆಗೂ ಟಾರ್ ಹಾಕಿಲ್ಲ

''ಇದೇ ರೀತಿ ವಿವೇಕಾನಂದ ರಸ್ತೆಗೆ ಟಾರ್ ಹಾಕುವ ವಿಷಯವನ್ನೂ ಪಾಲಿಕೆಯು ಗಮನಿಸುತ್ತಿಲ್ಲ, ಒಳಚರಂಡಿ ಯೋಜನೆಗಾಗಿ

>>> 7ನೇ ಪುಟಕ್ಕೆ

## ವಿದ್ಯುತ್ ಅಭಾವ ತಲೆದೋರದಂತೆ ಕ್ರಮ

ಬೆಂಗಳೂರು

ರಾಜ್ಯದಲ್ಲಿ ಯಾವುದೇ ಕಾರಣಕ್ಕೂ ವಿದ್ಯುತ್ ಅಭಾವ ತಲೆದೋರದಂತೆ ನೋಡಿಕೊಳ್ಳಲಾಗುವುದು ಎಂದು ಇಂಧನ ಸಚಿವ ಡಿ.ಕೆ. ಶಿವಕುಮಾರ್ ವಿಧಾನಪರಿಷತ್‌ನಲ್ಲಿ ಭರವಸೆ ನೀಡಿದರು.

ಪ್ರಶ್ನೋತ್ತರ ಕಲಾಪದಲ್ಲಿ ಮೋಟಮ್ಮ ಅವರ ಪರವಾಗಿ ಐವಾನ್ ಡಿಸೋಜಾ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ರೈತರಿಗೆ ಕೈಗಾರಿಕೆಗಳಿಗೆ ಸೇರಿದಂತೆ ಯಾರಿಗೂ ಯಾವುದೇ ಕಾರಣಕ್ಕೂ ವಿದ್ಯುತ್ ಅಭಾವ ತಲೆದೋರದಂತೆ ಅಗತ್ಯಕ್ರಮಕೈಗೊಳ್ಳಲಾಗಿದೆ ಎಂದರು.

ಪ್ರಸ್ತುತ ರಾಜ್ಯದಲ್ಲಿ ಸರಾಸರಿ ವಿದ್ಯುತ್ ಬೇಡಿಕೆ ಪ್ರಮಾಣ 10 ಸಾವಿರ ಮೆಗಾವ್ಯಾಟ್‌ಗಳಾಗಿದ್ದು, ಕಳೆದ ಜನವರಿ ತಿಂಗಳಲ್ಲಿ ಗರಿಷ್ಠ ವಿದ್ಯುತ್ ಬೇಡಿಕೆ 10347 ಮೆಗಾವ್ಯಾಟ್‌ಗಳನ್ನು ಪೂರೈಸಲಾಗಿದೆ. ವಿದ್ಯುತ್ ಅಭಾವ ನೀಗಿಸಲು ಮುಂಜಾಗ್ರತಾ ಕ್ರಮವಾಗಿ 900 ಮೆಗಾ ವ್ಯಾಟ್ ವಿದ್ಯುತ್ತನ್ನು ಅಲ್ಪಾವಧಿ ಆಧಾರದಲ್ಲಿ ಖರೀದಿಸಲಾಗುತ್ತಿದೆ ಎಂದರು.

ಜಲವಿದ್ಯುತ್ ಉತ್ಪಾದನಾ ಮೂಲಗಳಿಂದ 3788 ಮೆಗಾ ವ್ಯಾಟ್ ಶಾಖೋತ್ಪನ್ನ ಘಟಕಗಳಿಂದ 5020 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನಾ ಸ್ಥಾಪಿತ ಸಾಮರ್ಥ್ಯ ಹೊಂದಿದ್ದು ರಾಜ್ಯದಲ್ಲಿ ಲಭ್ಯವಿರುವ ಎಲ್ಲ ಸಾಂಪ್ರದಾಯಿಕ ಮೂಲಗಳನ್ನು ಬಳಸಿ ವಿದ್ಯುತ್ ಉತ್ಪಾದನಾ ಘಟಕಗಳನ್ನು ಸ್ಥಾಪಿಸಲಾಗಿದೆ. ಉತ್ಪಾದನಾ ಸಾಮರ್ಥ್ಯ ಹೆಚ್ಚಿಸಲು 370 ಮೆಗಾ ವ್ಯಾಟ್ ಅನಿಲ ಆಧಾರಿತ ಯೋಜನೆಯನ್ನು ಯಲಹಂಕದ ಬಳಿ ಅನುಷ್ಠಾನಗೊಳಿಸಲಾಗುತ್ತಿದ್ದು, ಮೇ 18 ರೊಳಗೆ ಚಾಲನೆಗೊಳ್ಳುವ ನಿರೀಕ್ಷೆ ಇದೆ ಎಂದು ಹೇಳಿದರು.

ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕಿನಲ್ಲಿ 2000 ಮೆಗಾ ವ್ಯಾಟ್ ಸಾಮರ್ಥ್ಯದ ಸೌರ ವಿದ್ಯುತ್ ಪಾರ್ಕ್ ಸ್ಥಾಪನೆಗೆ ಕ್ರಮ ವಹಿಸಲಾಗಿದೆ. ವಿಕೇಂದ್ರಿಕೃತ ವಿದ್ಯುತ್ ಉತ್ಪಾದನೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ 43 ತಾಲ್ಲೂಕುಗಳಲ್ಲಿ ಒಟ್ಟಾರೆ 860 ಮೆಗಾ ವ್ಯಾಟ್ ಸಾಮರ್ಥ್ಯದ ಸೌರವಿದ್ಯುತ್ ಯೋಜನೆಗಳಿಗೆ ಟೆಂಡರ್ ಕರೆಯಲಾಗಿದೆ ಎಂದು ಡಿ.ಕೆ.ಶಿವಕುಮಾರ್ ಹೇಳಿದರು.

59 ಹಿಂದುಳಿದ ತಾಲ್ಲೂಕುಗಳಲ್ಲಿ 105 ಮೆಗಾ ವ್ಯಾಟ್ ಹಾಗೂ ಕೇಂದ್ರ ಸರ್ಕಾರದ ಎಸ್‌ಇಸಿಐ ಯೋಜನೆಯಿಂದ 970 ಮೆಗಾ ವ್ಯಾಟ್ ಸಾಮರ್ಥ್ಯದ ಸೌರವಿದ್ಯುತ್



ಯೋಜನೆಗಳ ಸ್ಥಾಪನೆಗೆ ಹಂಚಿಕೆ ಮಾಡಲಾಗಿದ್ದು, ಈ ಪೈಕಿ 821 ಮೆಗಾ ವ್ಯಾಟ್ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ ಎಂದು ಸಚಿವರು ಹೇಳಿದರು.

ಬೇಸಿಗೆ ಸಮೀಪಿಸುತ್ತಿರುವುದರಿಂದ ವಿದ್ಯುತ್ ಪೂರೈಕೆಯಲ್ಲಿ ಯಾವುದೇ ರೀತಿಯ ವ್ಯತ್ಯಯ ಉಂಟಾಗಬಾರದೆಂಬ ಕಾರಣಕ್ಕೆ ವಿದೇಶದಿಂದ 10 ಲಕ್ಷ ಮೆಟ್ರಿಕ್‌ಟನ್ ಕಲ್ಲಿದ್ದಲನ್ನು ಆಮದು ಮಾಡಿಕೊಳ್ಳ ಲಾಗುವುದು. ಈ ಸಂಬಂಧ ಈಗಾಗಲೇ ಟೆಂಡರ್ ಪ್ರಕ್ರಿಯೆ ಅಂತಿಮ ಹಂತದಲ್ಲಿದ್ದು, ವಾರ ಅಥವಾ 15 ದಿನದೊಳಗೆ ಅಂತಿಮ ಪ್ರಕ್ರಿಯೆ ಮುಗಿಯಲಿದೆ ಎಂದು ತಿಳಿಸಿದರು.

ರಾಯಚೂರಿನ ವೈಟಿಪಿಎಸ್ ಹಾಗೂ ಬಿಟಿಪಿಎಸ್ ವಿದ್ಯುತ್ ಘಟಕಗಳಿಗೆ 136 ಲಕ್ಷ ಮೆಟ್ರಿಕ್‌ಟನ್‌ಕಲ್ಲಿದ್ದಲಿನ ಅವಶ್ಯಕತೆ ಇದೆ. ಕೇಂದ್ರದಿಂದ ನಮಗೆ ನಿಗದಿಯಾಗಿರುವ ಕಲ್ಲಿದ್ದಲು ಬರುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ವೈಟಿಪಿಎಸ್‌ಗೆ ಶೇ.32ರಷ್ಟು ಹಾಗೂ ಬಿಟಿಪಿಎಸ್‌ಗೆ ಶೇ.21ರಷ್ಟು ಮಾತ್ರಕಲ್ಲಿದ್ದಲು ಪೂರೈಕೆಯಾಗಿದೆ. ಈಗಾಗಲೇ ಬೇಸಿಗೆ ಪ್ರಾರಂಭವಾಗಿರುವ ಕಾರಣ ಜನರಿಗೆ ತೊಂದರೆಯಾಗದಂತೆ ವಿದೇಶದಿಂದ ಕಲ್ಲಿದ್ದಲು ಆಮದು ಮಾಡಿಕೊಳ್ಳಲಾಗುವುದು. ಇದಕ್ಕಾಗಿ ನೀರನ್ನು ಸಹ ಸಂಗ್ರಹಿಸಲಿದ್ದೇವೆ ಎಂದರು.

ರಾಜ್ಯಕ್ಕೆ ನಿಗದಿಯಾಗಿರುವ ಕಲ್ಲಿದ್ದಲನ್ನು ಪೂರೈಕೆ ಮಾಡಬೇಕೆಂದು ಕೇಂದ್ರ ಕಲ್ಲಿದ್ದಲು ಸಚಿವ ಪಿಯೂಷ್ ಗೋಯಲ್ ಅವರಿಗೆ ನಾನು ಹಾಗೂ ಮುಖ್ಯಮಂತ್ರಿಗಳು ಮನವಿ ಮಾಡಿದ್ದೇವೆ. ಖುದ್ದು ನಾನೇ ಕೇಂದ್ರ ಸಚಿವರಿಗೆ 51 ಪತ್ರಗಳನ್ನು ಬರೆದಿದ್ದೇನೆ. ಈವರೆಗೂ ಯಾವುದೇ ಉತ್ತರ ಬಂದಿಲ್ಲ ಎಂದು ಹೇಳಿದರು.

ಕಲ್ಲಿದ್ದಲು ಪೂರೈಕೆ ಮಾಡದಿರುವ ಬಗ್ಗೆ ನಾನು ವೈಯಕ್ತಿಕವಾಗಿ ಯಾರನ್ನೂ ದೂಷಿಸುವುದಿಲ್ಲ. ಕರ್ನಾಟಕವಷ್ಟೇ ಅಲ್ಲ ಬೇರೆ ಬೇರೆ ರಾಜ್ಯಗಳಲ್ಲೂ ಇದೇ ರೀತಿ ಸಮಸ್ಯೆ ಇದೆ. ನಮಗೆ ನಿಗದಿಯಾಗಿರುವಷ್ಟು

>>> 5ನೇ ಪುಟಕ್ಕೆ

### ಅಂಕು ಡೊಂಕು

ಚಿನ್ನೇನಹಳ್ಳಿ ಶಿವರಾಜ್





ನಿಮ್ಮ ಸಮಾವೇಶಕ್ಕೆ ಬರಬೇಕೆಂದಿದ್ದೆ, ನನ್ನ ಕೂಲಿ ಕೊಟ್ರೆ ಮಾತ್ರ ನಿಮ್ಮ ಜೊತೆಬರುವೆ, ಇಲ್ಲ ಅಂದರೆ ಬೇರೆ ಕೆಲಸ ಅಷ್ಟೆ